O.S.63/2009

DW-1

ದಿ. 20.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರಿ.ಎಂಕೆ ರವರಿಂದಃ-**

1. ನಾನು 9ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಲಾರಿ ಡ್ರೈವರ್ ಕೆಲಸ ಮಾಡುತ್ತೇನೆ. ನಾನು ವ್ಯವಸಾಯ ಮಾಡುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಈ ದಾವೆಯನ್ನು ಮಂಜುಳಾ ರವರು ಹೂಡಿರುತ್ತಾರೆ. ವಾದಿಯು ನನಗೆ ಏನು ಆಗಬೇಕಾಗಿಲ್ಲ. ನನ್ನ ತಾತ ಕಾಡೇಗೌಡ ರವರಿಗೆ ಮೂರು ಜನ ಮಕ್ಕಳು. ಅವರುಗಳೆಂದರೆ ಮಾದೇಗೌಡ, ಚಿಕ್ಕೇಗೌಡ ಮತ್ತು ಬೂರಮ್ಮ. ಕಾಡೇಗೌಡರಿಗೆ ಇಬ್ಬರು ಹೆಂಡತಿಯರು. ಮೊದಲನೇ ಹೆಂಡತಿ ಕುಳ್ಳಮ್ಮ ಮತ್ತು ಎರಡನೇ ಹೆಂಡತಿ ಚಾಮಮ್ಮ. ಚಾಮಮ್ಮರವರನ್ನು ಸದರಿ ಕಾಡೇಗೌಡರು ಅವರ ಮೊದಲನೇ ಹೆಂಡತಿ ಬದುಕಿರುವಾಗಲೇ ಮದುವೆ ಮಾಡಿಕೊಂಡಿದ್ರ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕುಳ್ಳಮ್ಮ ಮತ್ತು ಚಾಮಮ್ಮರವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಾದೇಗೌಡ ಮತ್ತು ಚಿಕ್ಕೇಗೌಡರು ಯಾವಾಗ ಮರಣ ಹೊಂದಿದರು ಎನ್ನುವುದು ನಿಮಗೆ ಗೊತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆಯಾದ ಚಿಕ್ಕೇಗೌಡರು 2003 ರಲ್ಲಿ ಮರಣ ಹೊಂದಿರುತ್ತಾರೆ ಆದರೆ ಮಾದೇಗೌಡರು ಯಾವಾಗ ಮರಣ ಹೊಂದಿದರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. ವಾದಿಯು ಈ ದಾವೆಯನ್ನು ಸರ್ವೆ ನಂ.103/1, 114, 103 ಮತ್ತು 101 ಜಮೀನುಗಳಿಗೆ ಸಂಬಂಧಿಸಿದಂತೆ ಹೂಡಿರುತ್ತಾರೆ. ಈ ದಾವೆಯನ್ನು ವಾದಿಯು

ತೊಳಸಮ್ಮ, ಮಾದೇಗೌಡ, ಚಿಕ್ಕೇಗೌಡ ಮತ್ತು ದೇವಮ್ಮರವರ ವಿರುದ್ದ ಹೂಡಿರುತ್ತಾರೆ. ವಾದಿಯ ತಂದೆ ಬದುಕಿರುವಾಗ ನಾನು ಅವರ ಮನೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ವಾದಿಯ ಮನೆಗೆ ನಾನು ಹೋಗಿ  ನಮ್ಮ ದೊಡ್ಡಪ್ಪ ಜಮೀನು ಮಾರಾಟ ಮಾಡುತ್ತಿದ್ದಾರೆ ನೀವು ಕೇಸು ಹಾಕಿ ಎಂದು ನಾನು ವಾದಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಮೋಟಮ್ಮ ಎನ್ನುವವರು ಗೊತ್ತು. ನಾನು ಮೋಟಮ್ಮರವರ ಮನೆಗೆ ಹೋಗಿ ಅವರನ್ನು ಹೆದರಿಸಿ ಈ ದಾವೆಯಲ್ಲಿ ವಾದಿಯ ಪರವಾಗಿ ಸಾಕ್ಷ್ಯ ನುಡಿಯದಂತೆ ತಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮೋಟಮ್ಮರವರು ಈ ದಾವೆಯಲ್ಲಿ ವಾದಿಯ ಪರವಾಗಿ ಸಾಕ್ಷ್ಯ ನುಡಿಯಲು ಪ್ರಮಾಣ ಪತ್ರವನ್ನು ಸಹ ಸಲ್ಲಿಸಿದ್ದರು ಆಗ ನಾನು ಆಕೆಗೆ ಹೆದರಿಸಿ ಸಾಕ್ಷ್ಯ ನುಡಿಯಲು ಬರದಂತೆ ತಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೋಟಮ್ಮರವರನ್ನು ಹೆದರಿಸಿದ ಕಾರಣಕ್ಕೆ ಅವರು ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ಬಂದಿಲ್ಲ ಎಂದರೆ ಸರಿಯಲ್ಲ. ಸದರಿ ಮೋಟಮ್ಮರವರ ಮನೆಯು ನಮ್ಮ ಜಮೀನಿನ ಪಕ್ಕದಲ್ಲಿಯೇ ಇದೆ ಎಂದರೆ ಸಾಕ್ಷಿಯು ಅದು ಇಲ್ಲ 850 ಮೀಟರ್ ಅಂತರದಲ್ಲಿ ಇದೆ ಎಂದು ನುಡಿಯುತ್ತಾರೆ.

3. ವಾದಿಯ ತಾಯಿ ಮಾದಮ್ಮ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾದಮ್ಮರವರು ಕಾಡೇಗೌಡನ ಎರಡನೇ ಹೆಂಡತಿಯಾದ ಚಾಮಮ್ಮನ ಮಗಳು ಎಂದರೆ ಸಾಕ್ಷಿಯು ಚಾಮಮ್ಮರವರಿಗೆ ಯಾವುದೇ ಮಕ್ಕಳು ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ವಾದಿಯ ತಾಯಿಯಾದ ಮಾದಮ್ಮರವರನ್ನು ಬೂರಮ್ಮ ಎಂತಲೂ ಕರೆಯುತ್ತಿದ್ದರು ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತುಗಳಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಮಮ್ಮರವರಿಗೆ ಗಂಡು ಮಕ್ಕಳು ಇರುವುದಿಲ್ಲ ಅವರಿಗೆ ಕೇವಲ ಮಾದಮ್ಮ ಎಂಬ ಹೆಸರಿನ ಒಬ್ಬ ಹೆಣ್ಣು ಮಗಳು ಇರುತ್ತಾರೆ ಎಂದರೆ ಸರಿಯಲ್ಲ.

4. ನಿಡಿ-1 ನ್ನು ಸುಳ್ಳು ಮಾಹಿತಿ ನೀಡಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತುಗಳಲ್ಲಿ ಹಿಸ್ಸಾ ಕೊಡಬೇಕಾಗುತ್ತದೆ ಎಂದು ನಿಡಿ-1 ರಂತೆ ಸುಳ್ಳು ದಾಖಲೆಯನ್ನು ಸೃಷ್ಟಿಸಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾವು ಸರ್ವೆ ನಂ.103/1, 114, 112 ಮತ್ತು 103 ರಲ್ಲಿ 1984 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ. ಸದರಿ ವಿಭಾಗದ ಪ್ರಕಾರ ನಿಮ್ಮ ಹಿಸ್ಸೆಗೆ ಯಾವ ಜಮೀನು ಬಂದಿರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸರ್ವೆ ನಂ.103 ರಲ್ಲಿ ನಮಗೆ 23 ಗುಂಟೆ ಜಮೀನು, ಮಾದೇಗೌಡರಿಗೆ 23 ಗುಂಟೆ ಜಮೀನು ಮತ್ತು ಸರ್ವೆ ನಂ.114 ರಲ್ಲಿ ತಲಾ 5 ವರೆ ಗುಂಟೆ ಜಮೀನು ಬಂದಿರುತ್ತದೆ ಎಂದು ನುಡಿಯುತ್ತಾರೆ. ಇನ್ನುಳಿದ ಜಮೀನುಗಳ ಬಗ್ಗೆ ನನಗೆ ಈಗ ಹೇಳಲು ಆಗುವುದಿಲ್ಲ. ವಿಭಾಗ ಮಾಡಿಕೊಂಡ ಬಗ್ಗೆ ಯಾವುದಾದರೂ ದಾಖಲೆಯನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿಯು ಪಹಣಿ ಮತ್ತು ಇಸಿಯನ್ನು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಸದರಿ ವಿಭಾಗದಲ್ಲಿ ಮಾದೇಗೌಡ ಮತ್ತು ಚಿಕ್ಕೇಗೌಡರು ಭಾಗಿಯಾಗಿದ್ದರು. ಮಾದೇಗೌಡ ಮತ್ತು ಚಿಕ್ಕೇಗೌಡರು ವಿಭಾಗ ಮಾಡಿಕೊಂಡ ಬಗ್ಗೆ ಯಾವುದೇ ವಿಭಾಗ ಪತ್ರವನ್ನು ನಾನು ಹಾಜರು ಪಡಿಸಿಲ್ಲ. ಸದರಿ ವಿಭಾಗದಂತೆ ಅವರವರ ಹೆಸರಿಗೆ ಖಾತೆ ಪಹಣಿಗಳು ಏನಾದರೂ ಆಗಿದ್ವ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಮ್ಮ ತಂದೆಯ ಹಿಸ್ಸೆಯ ಜಮೀನು ನಮ್ಮ ತಂದೆ ಹೆಸರಿಗೆ ಖಾತೆ ಆಗಿತ್ತು, ಆದರೆ ಮಾದೇಗೌಡರು ಮರಣ ಹೊಂದಿರುವ ಕಾರಣ ಆತನ ಹಿಸ್ಸೆಯ ಜಮೀನು ಆತನ ಹೆಂಡತಿಯ ಹೆಸರಿಗೆ ಖಾತೆಯಾಗಿರುತ್ತದೆ ಎಂದು ನುಡಿಯುತ್ತಾರೆ.

5. ಸರ್ವೆ ನಂ.103/3 ರಲ್ಲಿ ತಮ್ಮ ಹಿಸ್ಸೆಗೆ ಬಂದ ಜಮೀನನ್ನು ಮಾದೇಗೌಡರು ಮಾರಾಟ ಮಾಡಿರುತ್ತಾರೆ. ಸರ್ವೆ ನಂ.103/3 ರಲ್ಲಿ ಮಾದೇಗೌಡರಿಗೆ 23 ಗುಂಟೆ ಜಮೀನು ಬಂದಿತ್ತು. ಸದರಿ ಜಮೀನನ್ನು ಅವರು ಯಾರೋ ಮುಸ್ಲಾಮಾನರಿಗೆ ಮಾರಾಟ ಮಾಡಿದ್ದರು. ಈ ದಾವೆಯನ್ನು ಹೂಡುವುದಕ್ಕೂ ಮೊದಲೇ ಅವರು ಆ

ಜಮೀನನ್ನು ಮಾರಾಟ ಮಾಡಿದ್ದರು. ಮಾದೇಗೌಡರಿಗೆ ಇಬ್ಬರು ಹೆಂಡತಿಯರು. ಅವರುಗಳೆಂದರೆ ತೊಳಸಮ್ಮ ಮತ್ತು ಭಾಗಮ್ಮ. ಸದರಿ ಜಮೀನನ್ನು ತೊಳಸಮ್ಮ, ಮಾದೇಗೌಡ ಮತ್ತು ಭಾಗ್ಯಮ್ಮರವರು ಸೇರಿ ಮಾರಾಟ ಮಾಡಿದ್ರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಮಾದೇಗೌಡ ಮತ್ತು ಭಾಗ್ಯಮ್ಮರವರು ತೀರಿಹೋದ ನಂತರ ತೊಳಸಮ್ಮ ರವರು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ತೊಳಸಮ್ಮ ಮತ್ತು ಆಕೆಯ ಮಕ್ಕಳಾದ ಮಂಜುಳಾ, ಸುಕನ್ಯ ಮತ್ತು ರಾಜೇಶ ರವರು ಸೇರಿಕೊಂಡು ಮಾರಾಟ ಮಾಡಿರುತ್ತಾರೆ. ಅವರು ಜಮೀನನ್ನು ಯಾವ ಇಸವಿಯಲ್ಲಿ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

6. ನಾನು ಯಾವುದೇ ಜಮೀನನ್ನು ಮಾರಾಟ ಮಾಡಿಲ್ಲ. ನನ್ನ ತಂದೆ ಚಿಕ್ಕೇಗೌಡರಿಗೆ 5 ಜನ ಮಕ್ಕಳು. ಅವರುಗಳೆಂದರೆ ಮಾದೇಗೌಡ, ಲಕ್ಷ್ಮಣ, ಪಾರ್ವತಮ್ಮ, ಮಹದೇವಮ್ಮ ಮತ್ತು ಶಿವರುದ್ರೇಗೌಡ ಅಂದರೆ ನಾನು.

ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಆಲಿಸಿ ನೀಡಲಾಯಿತು.

ಓ ಹೇ ಕೇ ಸರಿ ಇದೆ

(ರಾಧಾ ಎಸ್ )
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಕನಕಪುರ .